( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 20/01/2020**

**ಅಸಲು ದಾವೆ.ನಂ. 281/2017**

**ಪಿ.ಡಬ್ಲ್ಯೂ 2**

( ಪಾಟೀ ಸವಾಲುಃ ಶ್ರೀ ಎಸ್.ಪಿ.ಜಿ. ವಕೀಲರು 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ )

ಸರ್ವೆ ನಂಃ 87/3 ರ ಸಂಬಂಧ 10 ವರ್ಷಗಳ ಹಿಂದೆ ವ್ಯವಹಾರ ನಡೆದಿರುತ್ತದೆ. ನಮ್ಮ ಗ್ರಾಮದ ಲಕ್ಷ್ಮಮ್ಮನವರ ಮನೆಯಲ್ಲಿ ಮತುಕತೆ ನಡೆದಿರುತ್ತದೆ. ಮತುಕತೆಯಾಗಿ 2 ದಿನಗಳ ನಂತರ ಪತ್ರ ಬರೆಯಲಾಗಿರುತ್ತದೆ. ಮಾತುಕತೆಯ ಸಮಯದಲ್ಲಿ ನಾನು, ವಾದಿ ಪ್ರತಿವಾದಿಯರು ಮತ್ತು ರಾಜೇಗೌಡ ಇದ್ದೇವು. ಪತ್ರವನ್ನು ದಿಃ24-06-2010 ರಂದು ಬೆಳಗ್ಗೆ 11.00 ರಿಂದ 12.00 ಗಂಟೆಯ ನಡುವೆ ಬರೆಯಲಾಗಿರುತ್ತದೆ. ನಿಪಿ-1 ರಲ್ಲಿ ಏನು ಷರತ್ತು ನಮೂದಾಗಿದೆ ಎಂದರೆ ಸಾಕ್ಷಿಯ ಪ್ರತಿವಾದಿಯ ತಮ್ಮ ಹೆಸರಿಗೆ ಖಾತೆ ಬದಲಾವಣೆಯಾದ ನಂತರ ಪತ್ರ ನೋಂದಣಿ ಮಾಡಿಸಿಕೊಡುವುದಾಗಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ದಾಖಲೆಗಳು ನಂಜೇಗೌಡರ ಹೆಸರಿನಲ್ಲಿ ಇತ್ತು.

ನಿಪಿ-1 ಪತ್ರವನ್ನು ಅನಂತಮಂಗಳಂರವರು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಬರೆದಿರುತ್ತಾರೆ. ನಾನು ಮತ್ತು ರಾಜೇಗೌಡ ಒಟ್ಟಿಗೆ ಬಂದಿರುತ್ತೇವೆ. ನಿಪಿ-1 ಕ್ಕೆ 1 ನೇ ಪ್ರತಿವಾದಿ ಮೊದಲಿಗೆ ಸಹಿ ಮಾಡಿರುತ್ತಾರೆ. ನಂತರ ನಾರಾಯಣ ಸಹಿ ಮಾಡಿರುತ್ತಾರೆ. ನಾವುಗಳೆಲ್ಲಾ ನಿಪಿ-1 ಕ್ಕೆ ಸಹಿ ಗಳನ್ನು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಮಾಡಿರುತ್ತೇವೆ.

ಪ್ರತಿವಾದಿಯಾರಿಗೆ ಆ ದಿನ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರಿಗೆ 2 ಲಕ್ಷ 5 ಸಾವಿರ ರೂ. ಹಣ ಸಂದಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ನಿಪಿ-1 ರಲ್ಲಿ ತಿಳಿಸಿದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ. ಪ್ರತಿವಾದಿಯರು 1 ತಿಂಗಳಲ್ಲಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳುವುದಾಗಿ ತಿಳಿಸಿದ್ದು, ನಿಪಿ-1 ರಲ್ಲಿ ನಮೂದು ಮಾಡಿಲ್ಲ. ಪ್ರತಿವಾದಿಯರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳದ ಪಕ್ಷದಲ್ಲಿ ಏನು ಮಾಡಬಹುದು ಎಂದು ನಿಪಿ-1 ರಲ್ಲಿ ನಮೂದು ಮಾಡಿಲ್ಲ.

ಸರ್ವೆ ನಂಃ 87/3 ರಲ್ಲಿ 1 ಎಕರೆ ಜಮೀನಿಗೆ ಕ್ರಯ ಕರಾರು ಆಗಿದ್ದು, ಒಟ್ಟು 1 ಎಕರೆ 12 ಗುಂಟೆ ಪ್ರತಿವಾದಿಯರಿಗೆ ಸೇರಿತ್ತು. ಉಳಿಕೆ 12 ಗುಂಟೆ ಜಮೀನು 1 ಎಕರೆ ಜಮೀನಿನ ಪೂರ್ವ ದಿಕ್ಕಿಗೆ ಬರುತ್ತದೆ. ನಿಪಿ-1 ಕ್ಕೆ 1 ರಿಂದ 3 ನೇ ಪ್ರತಿವಾದಿಯರು 2 ಕಡೆ ಸಹಿ ಮಾಡಿರುತ್ತಾರೆ. ನಿಪಿ-1 ರ ಪತ್ರ ಬರವಣಿಗೆಯಾದ ನಂತರ ಸಹಿ ಮಾಡಿ ನಾನು ಹೊರಟು ಹೋಗಿರುತ್ತೇನೆ. ಉಳಿದವರು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಇದ್ದರು. ನಿಪಿ-1 ನೋಂದಣಿಯಾಯಿತೋ ಇಲ್ಲವೋ ಗೊತ್ತಿಲ್ಲ. ನಮ್ಮನ್ನು ವಾದಿ ಮತ್ತು ಪ್ರತಿವಾದಿಯರು ಕರೆದಿರುತ್ತಾರೆ.

ನನ್ನ ಮತ್ತು 1 ನೇ ಪ್ರತಿವಾದಿಯರ ನಡುವೆ ಆಸ್ತಿ ವಿಚಾರವಾಗಿ ವ್ಯಾಜ್ಯ ಇದೆ ಎಂದರೆ ಸರಿಯಲ್ಲ. ಆ ದಿನ 1000/- 100/- ಮತ್ತು 500/- ರೂ. ಮುಖ ಬೆಲೆಯ ನೋಟುಗಳಲ್ಲಿ ಹಣ ಸಂದಾಯವಾಗಿರುತ್ತದೆ. 1 ರಿಂದ 3 ನೇ ಪ್ರತಿವಾದಿಯರಿಂದ 4 ನೇ ಪ್ರತಿವಾದಿಯ ಪರವಾಗಿ ಕ್ರಯ ಪತ್ರ ವಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಆ ದಿನ ಯಾವುದೇ ಕ್ರಯದ ಕರಾರು ಪತ್ರವಾಗಿಲ್ಲ ನಾವು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಹೋಗಿಲ್ಲ, ಆ ದಿನ ನಮ್ಮ ಸಮಕ್ಷಮ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಪ್ರತಿವಾದಿಯರಿಗೂ ದ್ವೇಷವಿರುವ ಕಾರಣ ನಿಪಿ-1 ನ್ನು ವಾದಿಯೊಂದಿಗೆ ಷರೀಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಸಹಿಗಳು 1 ರಿಂದ 3 ನೇ ಪ್ರತಿವಾದಿಯರದ್ದಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗನಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ವಕೀಲರು ಏನು ಇಲ್ಲ ಎಂದು ತಿಳಿಸಿರುತ್ತಾರೆ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**